ಆಲಮಟ್ಟಿ ಜಲ ವಿದ್ಯುತ್ ಯೋಜನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 157(215)

ಸದಸ್ಯರ ಹೆಸರು ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಅ ಪಾಟೀಲ್(ಇಂಧನ ರಾಜ್ಯ ಸಚಿವರು)

ಪ್ರಶ್ನೆ

ಅ ಆಲಮಟ್ಟಿ ಜಲ ವಿದ್ಯುತ್ ಯೋಜನೆಗೆ ನಿಗದಿಯಾದ ಹಣವೆಷ್ಟು?

ಆ ಇದುವರೆಗೂ ವೆಚ್ಚವಾಗಿರುವ ಹಣ ಎಷ್ಟು?

ಇ ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು? ಯೋಜನೆಯು ಈಗ ಯಾವ ಹಂತದಲ್ಲಿದೆ?

ಉತ್ತರ

ಅ ಈಗಿನ ಅಂದಾಜು ಪಟ್ಟಿಯ ಪ್ರಕಾರ ಆಲಮಟ್ಟಿ ಅಣೆಕಟ್ಟು ವಿದ್ಯುದಾಗಾರ ಯೋಜನೆಯ ಒಟ್ಟು ಅಂದಾಜು ವೆಚ್ಚ ರೂ 695 00 ಕೋಟಿ

ಆ ಈ ಯೋಜನೆಗೆ ಇದುವರೆಗೂ ಆಗಿರುವ ವೆಚ್ಚವು ರೂ 47 04 ಕೋಟಿ

ಇ ಈ ಯೋಜನೆಯನ್ನು ಕಾರ್ಯರಂಭ ಮಾಡಿದ ದಿನದಿಂದ 37 ತಿಂಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಈ ಯೋಜನೆಗೆ ಮುಖ್ಯವಾಗಿ ಕೇಂದ್ರಿಯ ವಿದ್ಯುತ್ ಪ್ರಾಧಿಕಾರದ (ಸಿ ಇ ಎ) ಅನುಮತಿ ಇನ್ನೂ ಬರಬೇಕಾಗಿದ್ದು ಸಿ ಇ ಎ ಗೆ ಎಲ್ಲಾ ವಿವರಗಳನ್ನು ಸಲ್ಲಿಸಲಾಗಿದ್ದು ಸಿ ಇ ಎ ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಸಮಜಾಯಿಷಿ ಉತ್ತರಗಳನ್ನು ಸಲ್ಲಿಸಲಾಗಿದೆ ಸಿ ಇ ಎ ಅನುಮತಿಯು ಈ ಜನವರಿ ತಿಂಗಳಲ್ಲಿ ಬರುವ ನಿರೀಕ್ಷೆಯಿದೆ

ಈ ಯೋಜನೆಗೆ ಸಂಬಂಧಿಸಿದ ಅನುಷ್ಠಾನ ಪೂರ್ವ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲಾಗಿದೆ

ಆಲಮಟ್ಟಿ ಅಣೆಕಟ್ಟು ವಿದ್ಯುದಾಗಾರದ ನಿರ್ಮಾಣಕ್ಕಾಗಿ ಕರೆಯಲಾಗಿದ್ದ ಟೆಂಡರುಗಳನ್ನು ಕರೆಯಲಾಗಿದ್ದು ಇವುಗಳು ಪರಿಶೀಲನೆ ಪ್ರಗತಿಯಲ್ಲಿವೆ